**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ತುಮಕೂರು-ಮಧುಗಿರಿ**

**ಎಸ್.ಸಿ.ಸಂಖ್ಯೆ:** 5037/2023 ಫ್ರಾಸಾ-12
ಚಾಸಾ-04

ದಿನಾಂಕಃ 20-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಶ್ರೀದೇವಿ |
| **ತಂದೆಯ / ಗಂಡನ ಹೆಸರು** | ಹರಿನಾಥರೆಡ್ಡಿ |
| **ವಯಸ್ಸು** | 36 |
| **ಉದ್ಯೋಗ** | ಖಾಸಗಿ ಶಾಲೆಯಲ್ಲಿ ಶಿಕ್ಷಕಿ |
| **ವಾಸಸ್ಥಳ** | ಮಡಕಸಿರಾ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ವಿ.ಸಿ. ಮುಖಾಂತರ ಹಾಜರುಪಡಿಸಿದ ಆರೋಪಿಯ ಪರಿಚಯ ಇರುತ್ತದೆ, ಮೃತ ಲಕ್ಷ್ಮಿಯ ಪರಿಚಯ ಇತ್ತು. 2 ವರ್ಷದ ಹಿಂದೆ ಲಕ್ಷ್ಮೀ ತೀರಿಕೊಂಡಿರುತ್ತಾಳೆ. ಲಕ್ಷ್ಮಿಯ ಸಾವು ಹೇಗೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಆರೋಪಿ ಮತ್ತು ಲಕ್ಷ್ಮಿ ಮಧ್ಯೆ ಸಂಬಂಧ ಹೇಗಿತ್ತು ಎಂದು ನನಗೆ ಗೊತ್ತಿಲ್ಲ. ನಾನು ಯಾವುದೇ ಘಟನೆ ನೋಡಿರುವುದಿಲ್ಲ. ರಾಮಾಂಜಿ ಜೈಲಿನಲ್ಲಿರುತ್ತಾನೆ, ಆರೋಪಿ ಯ್ಯಾಕ್ಕೆ ಜೈಲಿನಲ್ಲಿರುತ್ತಾನೆಂದು ನನಗೆ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ-**

ನನ್ನ ತಂದೆಯ ಮನೆ ಮತ್ತು ಆರೋಪಿಯ ಮನೆ ಮಧ್ಯೆ 5-6 ಮನೆಗಳು ಇರುತ್ತವೆ.

ದಿ. 15.08.2023 ರಂದು ರಾತ್ರಿ 8-00 ಗಂಟೆ ನಾನು ಮನೆಯಲ್ಲಿ ಇದ್ದಾಗ ರಾತ್ರಿ 10-30 ಗಂಟೆಗೆ ರಾಮಾಂಜಿ ಗಲಾಟೆ ಮಾಡುವ ಶಬ್ದ ಕೇಳಿ ಹೊರಗೆ ಬಂದು ನೋಡಲಾಗಿ ರಾಮಾಂಜಿ ತನ್ನ ಹೆಂಡತಿ ಲಕ್ಷ್ಮಿ ರವರ ಮೇಲೆ ವರಂಡದಲ್ಲಿ ಜಗಳ ಮಾಡುತ್ತಿದ್ದು ಲಕ್ಷ್ಮಿಯು ಕೆ. ರಾಮಾಪುರ ನರಸಿಂಹಮೂರ್ತಿ ರವರ ಜೊತೆ ಫೋನ್ ನಲ್ಲಿ ಮಾತನಾಡುತ್ತಾಳೆ ಎಂದು ಕೈಗಳಿಂದ ಹೊಡೆಯುತ್ತಿದ್ದರು ನಂತರ ಏಕಾ ಏಕಿ ಒಣಕೆಯನ್ನು ತಂದು ಲಕ್ಷ್ಮಿ ತಲೆಗೆ 2-3 ಬಾರಿ ಹೊಡೆದಿದ್ದು ಲಕ್ಷ್ಮಿ ಕೆಳಗೆ ಬಿದಿದ್ದು ರಾಮಾಂಜಿ ಒಣಕೆ ಅಲ್ಲೆ ಬಿಸಾಕಿ ಹೊರಟು ಹೋಗಿರುತ್ತಾನೆ. ನತಂರ ನಾನು ಹೋಗಿ ನೋಡಲಾಗಿ ಲಕ್ಷ್ಮಿ ತಲೆಯಲ್ಲಿ ಗಾಯವಾಗಿ ರಕ್ತ ಹರಿದು ಸ್ಥಳದಲ್ಲಿಯೋ ಸತ್ತು ಹೋಗಿದ್ದಳು ಎಂದರೆ ಸರಿಯಲ್ಲ. ರಾಮಾಂಜಿ ಲಕ್ಷ್ಮಿ ಗೆ ಹೊಡೆಯಲು ಉಪಯೋಗಿಸಿದ ಒಣಕೆ ಒಂದು ಕಡೆ ಮುರಿದು ಪೀಸಾಗಿ ಅಲ್ಲಿಯೇ ಬಿದ್ದಿತ್ತು ನೋಡಿದರೆ ಗುರುತಿಸುತ್ತೇನೆಂದು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಈಗ ಓದಿ ಹೇಳಿದಂತೆ ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-16 ಎಂದು ಗುರುತಿಸಲಾಯಿತು. ಈ ಘಟನೆಯನ್ನು ನಾನು ಪ್ರತ್ಯಕ್ಷವಾಗಿ ನೋಡಿದ್ದರೂ ಕೂಡ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು . ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**